**<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).</u>**
**<u>ಸ್ಪೆಷಲ್ ಕೇಸ್. ನಂ. 5014/2020</u>**

**ಪ್ರಾಸಾ ಃ 4**

**ಚಾಸಾ ಃ 4**

ಸಾಕ್ಷಿಯ ಹೆಸರು ಃ ಪಲ್ಲವಿ
ತಂದೆಯ ಹೆಸರುಃ ರಾಮು
ವಯಸ್ಸು ಃ 25 ವರ್ಷ
ವೃತ್ತಿ ಃ ಕೂಲಿ ಕೆಲಸ
ವಿಳಾಸ ಃ ಅಯ್ಯನಕೆರೆ ಹಾಡಿ
ದಿಃ 23.06.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>**

1. ಮೃತ ಲಕ್ಷ್ಮಿ ನನ್ನ ತಂದೆ. ಚಾಸಾ 1 ನನ್ನ ತಂದೆ, ಚಾಸಾ 2 ನನ್ನ ತಾಯಿ. ನಾನು ನನ್ನ ತಂದೆ, ತಾಯಿ ಮತ್ತು ನನ್ನ ಸಹೋದರ ಅಯ್ಯನಕೆರೆ ಹಾಡಿಯಲ್ಲಿ ವಾಸವಾಗಿದ್ದೇವೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಆರೋಪಿ ಉಡವಿಪುರ ಗ್ರಾಮದ ವಾಸಿ ಆತ ನಮ್ಮ ಹಾಡಿಯಲ್ಲಿರುವ ಕೆಲಸದವರವರನ್ನು ಜೀಪ್ ನಲ್ಲಿ ಕೊಡಗಿನ ಬಾಳೆಲೆ, ಪೊನ್ನಂಪೇಟೆ ಹಾಗೂ ಬೇರೆ ಬೇರೆ ಕಡೆ ಕಳೆದ 4-5 ವರ್ಷಗಳಿಂದ ಕರೆದುಕೊಂಡು ಹೋಗುತ್ತಿದ್ದರು. ನನ್ನ ತಂಗಿ ಲಕ್ಷ್ಮಿಯನ್ನು ಕೂಡ ಆರೋಪಿ ಜೀಪ್ ನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು.



2. ಆರೋಪಿ ಹಾಗೂ ನನ್ನ ತಂಗಿ ಒಬ್ಬರಿಗೊಬ್ಬರು ಇಷ್ಟಪಟ್ಟಿದ್ದರು. ನನಗೆ ನನ್ನ ತಂಗಿ ಲಕ್ಷ್ಮಿ ಈ ವಿಷಯ ಹೇಳಿದ್ದಳು. 3-4 ವರ್ಷದಿಂದ ಆಕೆ ಹಾಗೂ ಆರೋಪಿ ಒಬ್ಬರನ್ನೊಬ್ಬರು ಇಷ್ಟಪಟ್ಟಿದ್ದಾಗಿ ಲಕ್ಷ್ಮಿ ನನಗೆ ಹೇಳಿದ್ದಳು. ನಂತರ ಆರೋಪಿಯು ತಿತಿಮತಿಯಲ್ಲಿರುವ ಒಬ್ಬ ಹುಡುಗಿಯನ್ನು ಇಷ್ಟಪಟ್ಟಿದ್ದಾಗಿ ಲಕ್ಷ್ಮಿ ನನಗೆ ಹೇಳಿದಳು. ನನ್ನ ತಂಗಿ ಲಕ್ಷ್ಮಿ ಈ ಬಗ್ಗೆ ಆರೋಪಿಯನ್ನು ಕೇಳಿದಾಗ ಆರೋಪಿಯು ಕೆಲಸದ ಆಳುಗಳ ಮುಂದೆ ಆಕೆಯ ಜೊತೆ ಜಗಳ ಮಾಡಿದ್ದರು ಎಂದು ಲಕ್ಷ್ಮಿ ನನಗೆ ಹೇಳಿದ್ದಳು. ಆಗ

ಆರೋಪಿಯು ನೀವು ಜೇನು ಕುರುಬರ ಜಾತಿಯವರು, ನನ್ನ ಜಾತಿಗೆ ಸರಿ ಹೊ ೀಗುವುದಿಲ್ಲ ಎಂದು ಹೇಳಿದ್ದರು ಎಂದು ಲಕ್ಷ್ಮಿ ನನಗೆ ಹೇಳಿದ್ದಳು. ಜಗಳವಾದ ನಂತರ ಲಕ್ಷ್ಮಿ ಕೆಲಸಕ್ಕೆ ಹೋಗುತ್ತಿರಲಿಲ್ಲ.

3. ದಿಃ 03.02.2020 ರಂದು ಆರೋಪಿಯು ಕೆಲಸದ ಆಳುಗಳನ್ನು ಕರೆದುಕೊಂಡು ಹೋಗಿ ಬಿಟ್ಟು ಬಂದು ನಂತರ ಲಕ್ಷ್ಮಿಯನ್ನು ಬೆಃ 9.00 ಗಂಟೆಗೆ ಜೀಪಿನಲ್ಲಿ ಕರೆದುಕೊಂಡು ಹೋಗಿದ್ದು ಆಗ ಜೀಪಿನಲ್ಲಿ ಬೇರೆ ಯಾರು ಇರಲಿಲ್ಲ. ಆಗ ನಾನು ಮನೆಯಲ್ಲಿ ಇದ್ದೆ. ಮಃ 1.00 ಗಂಟೆಗೆ ಕಾಂತರಾಜುರವರು ಫೋನ್ ಮಾಡಿ ನಿನ್ನ ತಂಗಿ ಕೀಟ ನಾಶಕ ಸೇವಿಸಿ ಹನಗೋಡು ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ಹೇಳಿದರು. ಆಗ ನಾನು ಹಾಗೂ ಶ್ವೇತಾ ಹನಗೋಡು ಆಸ್ಪತ್ರೆಗೆ ಹೋದೆವು. ಆಗ ವೈದ್ಯರು ಲಕ್ಷ್ಮಿಗೆ ಚಿಕಿತ್ಸೆ ಕೊಡುತ್ತಿದ್ದರು. ನಾನು ಲಕ್ಷ್ಮಿಯನ್ನು



ವಿಚಾರಿಸಿದಾಗ ಆಕೆ ಆರೋಪಿಯು ಆಕೆಗೆ ಹೊಡೆದು-ಬಡಿದು ವಿಷ ಕುಡಿಸಿದ್ದಾನೆ ಎಂದು ಹೇಳಿದರು. ನಾವು ವೈದ್ಯರನ್ನು ಕೇಳಿದಾಗ ಆರೋಪಿಯೇ ಲಕ್ಷ್ಮಿಯನ್ನು ಆಸ್ಪತ್ರೆಗೆ ಸೇರಿಸಿದ್ದು ಎಂದು ಹೇಳಿದರು. 4 ನೇ ತಾರೀಖಿಗೆ ನಾನು ನನ್ನ ತಂದೆ ತಾಯಿಗೆ ಫೋನ್ ಮಾಡಿದ್ದು 5 ನೇ ತಾರೀಖಿಗೆ ಅವರು ಆಸ್ಪತ್ರೆಗೆ ಬಂದರು. ನನ್ನ ತಂದೆ ತಾಯಿ ಲಕ್ಷ್ಮಿಯನ್ನು ವಿಚಾರಿಸಿದಾಗ ಆಕೆಯು ಆರೋಪಿಯು ಬೇರೆ ಹುಡುಗಿಯನ್ನು ಇಷ್ಟಪಟ್ಟಿದ್ದು ನಾನು ಈ ಬಗ್ಗೆ ಆರೋಪಿಯನ್ನು ಕೇಳಿದಾಗ ಆತನು ನಿಮ್ಮ ಜಾತಿ ನಮ್ಮ ಜಾತಿ ಸರಿ ಹೋಗುವುದಿಲ್ಲ ಎಂದು ಹೇಳಿ, ನೀನು ಬೇರೆ ಹುಡುಗಿಯನ್ನು ಮದುವೆಯಾಗಲು ಬಿಡುವುದಿಲ್ಲ ಎಂದು ಹೇಳಿ ನನಗೆ ಹೊಡೆದು ಬಡಿದು ವಿಷ ಕುಡಿಸಿದ್ದಾನೆ ಎಂದು ಹೇಳಿರುತ್ತಾಳೆ. ನಂತರ ಲಕ್ಷ್ಮಿಯನ್ನು ಕೆ ಆರ್ ಆಸ್ಪತ್ರೆಗೆ 6 ನೇ ತಾರೀಖಿಗೆ ಕರೆದುಕೊಂಡು ಹೋಗಿದ್ದು ಆಕೆ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ 10 ನೇ ತಾರೀಖಿಗೆ ಮೃತಪಟ್ಟಿರುತ್ತಾಳೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

4. ದಿಃ 03.02.2020 ರಂದು ಫೋನ್ ಬಂದಾಗ ನಾನು ನನ್ನ ನೆಂಟರ ಮನೆಯಿಲ್ಲಿ

ಇದ್ದೆ. ನಮ್ಮ ನೆಂಟರ ಊರು ನಾಗಪುರ. ಅಯ್ಯನಕೆರೆ ಹಾಡಿಯಿಂದ ನಾಗಪುರ ಸುಮಾರು 2-3 ಕಿಮಿ ಅಂತರದಲ್ಲಿ

.4.

ಇರಬಹುದು. ಆ ದಿನ ನಾನು ನೆಂಟರ ಮನೆಯಲ್ಲೇ ಬೆಳಗಿನ ಉಪಹಾರ ಸೇವಿಸಿದ್ದೆ. ಸಾಮಾನ್ಯವಾಗಿ ನನಗೆ ಬೆಃ 7 ರಿಂದ 8 ಗಂಟೆಯ ಒಳಗಡೆ ಬೆಳಗಿನ ಉಪಹಾರ ಸೇವಿಸುವ ಅಭ್ಯಾಸ ಇದೆ ಎಂದರೆ ಸರಿ. ಅಯ್ಯನಕೆರೆ ಹಾಡಿಯಿಂದ ನಾಗಪುರಕ್ಕೆ ಬಸ್ ಸೌಕರ್ಯ ಇದೆ. ನಾನು ಆ ದಿನ ನಮ್ಮ ಮಾವನ ಮನೆಯಲ್ಲಿ ಇದ್ದೆ. ದಿಃ 03.02.2020 ರಂದು ನನ್ನ ಬಳಿ ಮೊಬೈಲ್ ಇತ್ತು, ನನ್ನ ಮೊಬೈಲ್ ಗೆ ಫೋನ್ ಬಂದಿತ್ತು. ನನ್ನ ತಂದೆ ತಾಯಿಗೆ ಕರೆ ಮಾಡಲು ಅದೇ ದಿನ ಪ್ರಯತ್ನ ಪಟ್ಟಿದ್ದೆ, ನೆಟ್ ವರ್ಕ ಇರಲಿಲ್ಲವಾದ್ದ ಕಾರಣ ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ. ನಾನು ಆ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇನೆ. ನಾನು ಈ ವಿಷಯವನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯರು ಲಕ್ಷ್ಮಿಗೆ ಮಾತ್ರೆ ಕೊಡುತ್ತಿದ್ದರು ಹಾಗೂ ಗ್ಲೂಕೋಸ್ ಹಾಕುತ್ತಿದ್ದರು. ಲಕ್ಷ್ಮಿ ಆಸ್ಪತ್ರೆಯಲ್ಲಿ ತುಂಬಾ ಸುಸ್ತಾಗಿದ್ದಳು ಎಂದರೆ ಸರಿಯಲ್ಲ. ನಾನು ಆ ದಿನ ಪೂರ್ತಿ ಆಸ್ಪತ್ರೆಯಲ್ಲೇ ಇದ್ದೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಬಂದಿದ್ದರು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಬರೆದುಕೊಂಡರು, ನನ್ನ ಸಹಿಯನ್ನು ಪಡೆದುಕೊಂಡಿರಲಿಲ್ಲ. ನನ್ನ ತಂಗಿ ಲಕ್ಷ್ಮಿಯ ಹೇಳಿಕೆಯನ್ನು ಪಡೆದುಕೊಂಡರು. ಇಬ್ಬರು ಪೊಲೀಸರು ಬಂದಿದ್ದರು. ನಾನು 4 ನೇ ತಾರೀಖಿಗೆ ಬೆಃ 10 ಗಂಟೆಯ ಸುಮಾರಿಗೆ ನನ್ನ ತಂದೆಗೆ ಫೋನ್ ಮಾಡಿದ್ದೆ. ಆಗ ನನ್ನ ತಂದೆ 5 ನೇ ತಾರೀಖಿಗೆ ಬರುತ್ತೇನೆ ಎಂದು ಹೇಳಿದರು. ನಾನು ಲಕ್ಷ್ಮಿಯ ಆರೋಗ್ಯ ಸ್ಥಿತಿ

.5.

ಗಂಭೀರವಾಗಿದೆ ಈಗಲೇ ಬನ್ನಿ ಎಂದು ನನ್ನ ತಂದೆಗೆ ಹೇಳಿಲ್ಲ, ಸಾಕ್ಷಿ ಸ್ವತಃ ನುಡಿಯುತ್ತಾರೆ ಆಕೆಯ ಪರಿಸ್ಥಿತಿ ಅಷ್ಟೊಂದು ಗಂಭೀರ ಇರಲಿಲ್ಲ, ಆಕೆ ಮಾತನಾಡುತ್ತಿದ್ದಳು. ಆಸ್ಪತ್ರೆಯಲ್ಲಿ ಲಕ್ಷ್ಮಿ ನನ್ನ ಬಳಿ, ಪೊಲೀಸರ ಬಳಿ ಹಾಗೂ ನನ್ನ ತಂದೆಯ ಬಳಿ ಮಾತ್ರ ಆರೋಪಿಯು ವಿಷ ಕುಡಿಸಿದ ಬಗ್ಗೆ

ಹೇಳಿದ್ದಳು.  ನನ್ನ ತಂದೆ 5 ನೇ ತಾರೀಖಿಗೆ ಮಃ 11.30 ಗಂಟೆಗೆ ಆಸ್ಪತ್ರೆಗೆ ಬಂದಿದ್ದರು.

ಸೂಚನೆಃ ನಿಮ್ಮ ತಂದೆ ಬಂದ ಕೂಡಲೇ ಹನಗೋಡು ಆಸ್ಪತ್ರೆಯ ವೈದ್ಯರು ಲಕ್ಷ್ಮಿಯ ಸ್ಥಿತಿ ಚಿಂತಾಜನಕವಾಗಿದೆ, ಆಕೆ ಪ್ರಜ್ಞಾಹೀನಳಾಗಿದ್ದಾಳೆ, ಆಕೆಯನ್ನು ಬದುಕಿಸಬೇಕಾದರೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರು?

ಉಃ ವೈದ್ಯರು ಆಕೆಯನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರು.

5. 5 ನೇ ತಾರೀಖಿನಂದು ಲಕ್ಷ್ಮಿ ತುಂಬಾ ಸುಸ್ತಾಗಿ ಪ್ರಜ್ಞಾಹೀನಳಾಗಿದ್ದಳು ಎಂದರೆ ಸರಿಯಲ್ಲ. ನನ್ನ ತಂದೆ ಹೆಚ್ಚಿನ ಚಿಕಿತ್ಸೆಗೆ ಆಕೆಯನ್ನು ಮೈಸೂರಿಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರು. ಆಗ ನಾನು ಅಲ್ಲೇ ಇದ್ದೆ. ಲಕ್ಷ್ಮಿ ಹಾಗೂ ಆರೋಪಿಗೆ ಗಾಡಿಯಲ್ಲಿ ಹೋಗುವಾಗ ಜಗಳ ಆಗಿತ್ತು, ಯಾವ ಸ್ಥಳ ಎಂದು ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ



ಬಾಳೆಲೆಗೆ ಹೋಗಬೇಕಾದರೆ ಸುಮಾರು ಮುಕ್ಕಾಲು ಗಂಟೆ ಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಜೀಪಿನಲ್ಲಿ ಸುಮಾರು 13 ಆಳುಗಳನ್ನು ಕರೆದುಕೊಂಡು ಹೋಗುತ್ತಾರೆ, ಬೇರೆ ಬೇರೆ ಊರಿನ  ಆಳುಗಳನ್ನು ಹತ್ತಿಸಿಕೊಂಡು ಹೋಗುತ್ತಾರೆ.  ನಮ್ಮ ಊರಿನಿಂದ ಬಾಳೆಲೆ ಗ್ರಾಮಕ್ಕೆ ಆಳುಗಳನ್ನು ಕೆರದುಕೊಂಡು ಹೋಗಬೇಕಾದರೆ ಬೇರೆ ಬೇರೆ ಊರುಗಳಲ್ಲಿ ಆಳುಗಳನ್ನು ಹತ್ತಿಸಿಕೊಂಡು ಹೋಗುವಾಗ ಬಾಳೆಲೆ ಗ್ರಾಮ ತಲುಪಲು ಸುಮಾರು ಒಂದುವರೆ  ಗಂಟೆ ತಗಲುತ್ತದೆ ಎಂದರೆ  ಸರಿಯಲ್ಲ. ಬೆಃ 8 ರಿಂದ 8.30 ಗಂಟೆಯ ಸಮಯಕ್ಕೆ ನಾವು ತೋಟದಲ್ಲಿ ಇರಬೇಕಾಗುತ್ತದೆ.  ದಿಃ 03.02.2020 ಕ್ಕಿಂತ  2 ದಿನ ಮೊದಲು  ನಮ್ಮ ಮನೆಯ ಸದಸ್ಯರಿಗೂ ಹಾಗೂ ಲಕ್ಷ್ಮಿಗೂ ಗಲಾಟೆಯಾಗಿಲ್ಲ.  ನನ್ನ ತಂಗಿ ಲಕ್ಷ್ಮಿ ಆರೋಪಿಗೂ ಆಕೆಗೂ ಗಲಾಟೆಯಾದ ಬಗ್ಗೆ ನನಗೆ 3 ನೇ ತಾರೀಖಿಗೆ ಹೇಳಿದ್ದಳು.  ಅದಕ್ಕಿಂತ  ಮೊದಲು ಈ  ಬಗ್ಗೆ ನಿಮಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಅದಕ್ಕಿಂತ

ಮೊದಲೇ ಹೇಳಿದ್ದಳು. ನಾನು ವಿಕ್ಕಿಯನ್ನು ಇಷ್ಟಪಡುತ್ತಿದ್ದೇನೆ ಎಂದು ಲಕ್ಷ್ಮಿ ಹೇಳಿದ್ದಳು. ದಿಃ 03.02.2020 ರಂದು ನಾನು ಅಯ್ಯನಕೆರೆ ಹಾಡಿಯ ನಮ್ಮ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಲಕ್ಷ್ಮಿಗೆ ಹನಗೋಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹನಗೋಡು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಹನಗೋಡು ಆಸ್ಪತ್ರೆಯಲ್ಲಿ ಲಕ್ಷ್ಮಿ ನನಗೆ ಏನೂ ಹೇಳಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿಯು ತಾನು ಹಾಗೂ ಆರೋಪಿ ಪ್ರೀತಿಸುತ್ತಿದ್ದು ಈ ಮಧ್ಯ ಆತ ತಿತಿಮತಿಯ

.7.

ಹುಡುಗಿಯನ್ನು ಪ್ರೀತಿಸುತ್ತಿದ್ದು ಆ ಬಗ್ಗೆ ನಾನು ವಿಚಾರಿಸಿದಾಗ ನಮಗೆ ಗಲಾಟೆಯಾಗಿದೆ ಹಾಗೂ ಆರೋಪಿಯು ನೀನು ಕೀಳು ಜಾತಿಯವಳು, ನಮ್ಮ ಜಾತಿಗೂ ನಿಮ್ಮ ಜಾತಿಗೂ ಸರಿ ಬರುವುದಿಲ್ಲ ಎಂದು ಹೇಳಿ ಆಕೆಗೆ ಹೊಡೆದು ವಿಷ ಕುಡಿಸಿದ್ದಾನೆ ಎಂದು ಲಕ್ಷ್ಮಿ ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂದು ಆರೋಪಿ ಅಯ್ಯನಕೆರೆ ಹಾಡಿಗೆ ಬಂದೇ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 5 ನೇ ತಾರೀಖಿಗೆ ಹನಗೋಡು ಆಸ್ಪತ್ರೆಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಬಳಿ ಲಕ್ಷ್ಮಿ ಆರೋಪಿಯ ಬಗ್ಗೆ ಹಾಗೂ ಆತ ಆಕೆಗೆ ಬಲವಂತವಾಗಿ ವಿಷ ಕುಡಿಸಿದ್ದಾನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನತಂದೆ ತಾಯಿ ಫೋನ್ ಮಾಡಿ 10 ನೇ ತಾರೀಖಿಗೆ ಲಕ್ಷ್ಮಿ ಮೃತಪಟ್ಟ ಬಗ್ಗೆ ಹೇಳಿದ್ದರು. ಲಕ್ಷ್ಮಿ ಬದುಕಿದ್ದಾಗ ನಾನುಮೈಸೂರಿನ ಆಸ್ಪತ್ರೆಗೆ ಹೋಗಿರಲಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾವು ಜೇನು ಕುರುಬರ ಸಂಘದ ಪೊಣ್ಣಪ್ಪನವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ 1 ರಿಂದ 3 ರವರು ಆರೋಪಿಯಿಂದ ಹಣವನ್ನು ವಸೂಲಿ ಮಾಡಲು ಪ್ರಯತ್ನಿಸಿದ್ದು ಆತ ಹಣ ಕೊಡಲು ಒಪ್ಪದೇ ಇದ್ದ ಕಾರಣ ಆತನ ವಿರುದ್ದ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು  ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)